# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ದಕ್ಷಿಣ ವಲಯ ಪಟ್ಟಾಭಿರಾಮನಗರ,

ದಿನಾಂಕ: 02.07.2022 ರಂದು ವಾರ್ಡ್‌– 168 ಪಟ್ಟಾಭಿರಾಮನಗರ ವಾರ್ಡ್‌ನಲ್ಲಿ ನಡೆದ ಸಮಿತಿ ಸಭೆಯ ನಡವಳಿಗಳು :-

ವಾರ್ಡ್‌ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಮತ್ತು ವಾರ್ಡ್‌ 168 ಸಾರ್ವಜನಿಕರು

| ಕ್ರಮ ಸಂಖ್ಯೆ | ಹೆಸರು | ಹುದ್ದೆ |
|---|---|---|
| 01 | ಶ್ರೀ ಜಗದೀಶ್.ಕೆ ನಾಯಕ್ | ಜಂಟಿ ಅಯ್ತುಕರು (ದಕ್ಷಿಣ) ಹಾಗೂ ಅಧ್ಯಕ್ಷರು ವಾರ್ಡ್‌–168ರ ಸಮಿತಿ |
| 02 | ಶ್ರೀ ಚಂದ್ರಶೇಖರ್. ವಿ | ಕಾರ್ಯಾದರ್ಶಿ ಮತ್ತು ಸಂಚಾಲಕರು ವಾರ್ಡ್‌–168 |
| 03 | ಡಾ. ಹಲೀಮ್‌ಸಾರ | MO–168 |
| 04 | ಶ್ರೀ ರಾಮಚಂದ್ರ.ಸಿ | ಹಿರಿಯ ಆರೋಗ್ಯ–168 ನಿರೀಕ್ಷಕರು, ಬಿ.ಬಿ.ಎಂ.ಪಿ |
| 05 | ಶ್ರೀ ನಾಗರಾಜು .ಎಸ್ | ಕಂದಾಯ ಇಲಾಖೆ, ಬಿ.ಬಿ.ಎಂ.ಪಿ ಜಯನಗರ |
| 06 | ಶ್ರೀಮತಿ ಶಶಿಕಲಾ ಟಿಜೆ | ಸಕಾನಿಅ ಎಸ್.ಡಬ್ಲ್ಯೂ.ಎಮ್ ಜಯನಗರ |
| 07 | ಶ್ರೀ ಗೌತಮ್.ವೈ | ಕಿರಿಯ ಆರೋಗ್ಯ–168 ನಿರೀಕ್ಷಕರು, ಬಿ.ಬಿ.ಎಂ.ಪಿ |
| 08 | ಶ್ರೀ.ಮಂಜುನಾಥ್ ಕೆಸಿ | ಆರೋಗ್ಯ ನಿರೀಕ್ಷಕರು ಬಿ.ಬಿ.ಎಂ.ಪಿ. |
| 09 | ಶ್ರೀ ರಂಜೀತ್ ಕುಮಾರ್ | Supervisor, w-168 , SWM |
| 10 | ಶ್ರೀ ಗಂಗಾಧರ್ | W.I, BWSSB, ಜಯನಗರ |
| 11 | ಶ್ರೀ ಸಜ್ಜಪ್ಪ .ಬಿ | ಕಂದಾಯ ಇಲಾಖೆ, ಬಿ.ಬಿ.ಎಂ.ಪಿ ಜಯನಗರ |
| 12 | ಶ್ರೀ ವಿಜಯ್ | ಮಾರ್ಷಲ್–168 , ಬಿ.ಬಿ.ಎಂ.ಪಿ |
| 13 | ಶ್ರೀ.ಮಧುಸೂದನ್ ಬಿ.ಎನ್. | ರಸ್ತೆ ಮೂಲಭೂತ ಸೌಕರ್ಯ ವಿಭಾಗ(ದಕ್ಷಿಣ) |
| 14 | ಶ್ರೀ ಬಸಪ್ಪ | T.I ವಾರ್ಡ್‌–168 ಬಿ.ಬಿ.ಎಂ.ಪಿ |
| 15 | ಶ್ರೀ.ಗೋವಿಂದ | ಎಸ್.ಡಬ್ಲ್ಯೂ.ಎಮ್ ಬಿ.ಬಿ.ಎಂ.ಪಿ |
| 16 | ಶ್ರೀ ಗುರು ಎಂ | R.I ವಾರ್ಡ್‌–168 ಬಿ.ಬಿ.ಎಂ.ಪಿ |
| 17 | ಶ್ರೀ.ವಿಜಯಕುಮಾರ್ ಕೆ | ASI ಜಯನಗರ ಪೊಲೀಸ್ ಠಾಣೆ |
| 18 | ಶ್ರೀ.ಶಿವಕುಮಾರ್ ಕೆ.ಎಸ್. | ASI ಜಯನಗರ ಸಂಚಾರ ಪೊಲೀಸ್ ಠಾಣೆ |
| 19 | ಶ್ರೀಮತಿ.ಸಾವಿತ್ರಿ | ಲಿಂಕ್ ವರ್ಕರ್ಸ್ ಬಿ.ಬಿ.ಎಂ.ಪಿ |
| 20 | ವಾರ್ಡ್‌ 168ರ ಸ್ಥಳಿಯ ನಿವಾಸಿಗಳ ಸಂಘ ಮತ್ತು ನಾಗರೀಕರು | |

1. ನೋಡಲ್ ಅಧಿಕಾರಿಗಳು ಮಾತನಾಡುತ್ತಾ ದಿನಾಂಕ 18.06.2022 ರಂದು ಸಾರ್ವಜನಿಕರು ತಿಳಿಸಿದ ಸಮಸ್ಯೆಗಳ ಬಗ್ಗೆ ಹಾಗೂ ಅಧಿಕಾರಿಗಳು ತೆಗೆದುಕೊಂಡ ಕ್ರಮದ ಮಾಹಿತಿ ಪಡೆದುಕೊಂಡರು.

2. ಜಯನಗರ 4ನೇ 'ಟ' ಬ್ಲಾಕ್‌ನ 36ನೇ (ಅರ್.ವಿ ಕಾಲೇಜು ರಸ್ತೆ) ಅಡ್ಡರಸ್ತೆಯಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು. ಇದರಿಂದ ಸ್ಥಳಿಯ ನಿವಾಸಿಗಳಿಗೆ ಭಯದ ವಾತಾವರಣ ಸೃಷ್ಟಿಯಾಗಿದ್ದು. ಇದರ ಬಗ್ಗೆ ಕ್ರಮವಹಿಸಲು ಸಭೆಯಲ್ಲಿ ಕೋರಿದರು.
(ಆರೋಗ್ಯಧಿಕಾರಿಗಳು, ಬಿ.ಬಿ.ಎಂ.ಪಿ, ಜಯನಗರ & ಪ್ರಾಣಿ ದಯ ಸಂಘ, ಬಿ.ಬಿ.ಎಂ.ಪಿ)

3. ವಾರ್ಡ ಸಂಖ್ಯೆ 168 ರ ವ್ಯಾಪ್ತಿಯ ಜಯನಗರ ಮೇಟ್ರೋ ನಿಲ್ದಾಣದ ಹತ್ತಿರ ಆಟೋ ನಿಲ್ದಾಣವಿದ್ದು, ಅಲ್ಲಿನ ಆಟೋ ಮಾಲೀಕರು ಟ್ರಾಫ್ರಿಕ್ ನಿಮಯವಳಿಗಳನ್ನು ಪಾಲಿಸದೆ, ಮೇಟ್ರೋ ಸಂಚಾರಿಗಳಿಂದ ಬಾಡಿಗಿಗೆ ಹೆಚ್ಚಿನ ಹಣ ಪಡೆಯುತ್ತಾರೆ ಹಾಗೂ ಸಾರ್ವಜನಿಕರೊಂದಿಗೆ ಅಸಭ್ಯ ವರ್ತನೆಯಿಂದ ನಡೆದುಕೊಳ್ಳುತ್ತಿದ್ದು, ಇಲ್ಲಿ ಉದ್ಯಾನವನವಿದ್ದು ರಾತ್ರಿ ವೇಳೆಯಲ್ಲಿ ಕೆಲವು ಅನಾಮದೇಯ ವ್ಯಕ್ತಿಗಳಿಂದ ಕಾನೂನು ಬಾಹಿರ ಚಟುವಟಿಕೆ ಹಾಗೂ ಅಸಭ್ಯ ವರ್ತನೆ ತೋರುತ್ತಿದ್ದು. ಇದರ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಕ್ರಮ ವಹಿಸಲು ಸಭೆಯಲ್ಲಿ ಕೋರಿದರು.

(ಜಯನಗರ ಪೋಲಿಸ್ ಠಾಣೆ ಮತ್ತು ಜಯನಗರ ಸಂಚಾರ ಪೋಲಿಸ್ ಠಾಣೆ)

4. ವಾರ್ಡ ಸಂಖ್ಯೆ 168ರ ವ್ಯಾಪ್ತಿಯಲ್ಲಿರುವ ಜಯನಗರ 4ನೇ 'ಟಿ' ಬ್ಲಾಕ್‌ನ ಜಿ.ಎಸ್.ಆರ್ ಕಲ್ಯಾಣ ಮಂಟಪದ ಎದುರುಗಡೆ ವಾರಸುದಾರರಿಲ್ಲದ (ಬಿಡಾಡಿ) ವಾಹನಗಳಿದ್ದು, ಸದರಿ ವಾಹನಗಳನ್ನು ತೆರೆವುಗೊಳ್ಳಿಸುವಂತೆ ಸಭೆಯಲ್ಲಿ ಕೋರಿದರು.

(ಕ್ರಮ: ಸ.ಕಾ.ನಿ.ಅ, ಜಯನಗರ ಉಪ-ವಿಭಾಗ ಬಿ.ಬಿ.ಎಂ.ಪಿ & ಜಯನಗರ ಸಂಚಾರ ಪೋಲಿಸ್ ಠಾಣೆ)

5. ವಾರ್ಡ ಸಂಖ್ಯೆ 168 ರ ವ್ಯಾಪ್ತಿಯ 4ನೇ ಮುಖ್ಯರಸ್ತೆಯ(ನಂದ ಟಾಕೀಸ್) ಹತ್ತಿರ ಇರುವ 'Jayanagar Dry waste collection center' ನಲ್ಲಿ ರಾತ್ರಿವೇಳೆಯಲ್ಲಿ ಸಾರ್ವಜನಿಕರಿಗೆ ಮತ್ತು ಅಲ್ಲಿನ ನಿವಾಸಿಗಳಿಗೆ ಅನಾಮದೇಯ ವ್ಯಕ್ತಿಗಳಿಂದ ಬೆದರಿಕೆ ಹಾಕಿ ಹಣ ಕಿತ್ತುಕೊಳ್ಳುತ್ತಿದ್ದು ಹಾಗೂ ಸಾರ್ವಜನಿಕರೊಂದಿಗೆ ಅಸಭ್ಯ ವರ್ತನೆಯಿಂದ ನಡೆದುಕೊಳ್ಳುತ್ತಿದ್ದು, ಕಾನೂನು ಬಾಹಿರ ಚಟುವಟಿಕೆಗಳು ಮಾಡುತ್ತಿರುತ್ತಾರೆ. ಇದರ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಕ್ರಮ ವಹಿಸಲು ಸಭೆಯಲ್ಲಿ ಕೋರಿದರು. (ಜಯನಗರ ಪೋಲಿಸ್ ಠಾಣೆ)

6. ವಾರ್ಡ ಸಂಖ್ಯೆ 168 ರ ವ್ಯಾಪ್ತಿಯ 'Jayanagar Dry waste collection center' ನಲ್ಲಿ ಒಳಗಡೆ ಮತ್ತು ಹೊರಗಡೆಯಲ್ಲಿ ಬೀದಿ ದೀಪಗಳು ಉರಿಯುತ್ತಿರುವುದಿಲ್ಲ. ಇದರಿಂದ ಸದರಿ ಜಾಗದಲ್ಲಿ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿದ್ದು ಕೂಡಲೇ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ಕೋರಿದರು.

(ಕ್ರಮ: ಸ.ಕಾ.ನಿ.ಅ, ವಿದ್ಯುತ್(ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)

ಕೊನೆಯಲ್ಲಿ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸಾರ್ವಜನಿಕರಿಗೆ ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಎಲ್ಲಾ ಇಲಾಖೆ ಅಧಿಕಾರಿಗಳಿಗೆ ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

03/08/22

(ಡಾ: ಜಗದೀಶ್ ಕೆ ನಾಯಕ್)
ವಲಯ ಜಂಟಿ ಅಯುಕ್ತರು (ದಕ್ಷಿಣ)
ಹಾಗೂ ಅಧ್ಯಕ್ಷರು ವಾರ್ಡ-168 ರ ಸಮಿತಿ ಸಭೆ
ಮತ್ತು ನೋಡಲ್ ಅಧಿಕಾರಿಗಳು

ಪ್ರತಿಯನ್ನು:-

1. ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
2. ವಲಯ ಆಯುಕ್ತರು(ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
3. ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ಕಛೇರಿ ಕಡತಕ್ಕೆ.